ಅಸಲು ದಾವೆ ನಂ.20/2018 ಡಿ.ಡಬ್ಲೂಃ 3

ದಿನಾಂಕಃ 26/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ವಾದಿ ಪರವಾಗಿ ಶ್ರೀ ಹೆಚ್.ಆರ್.ಎನ್. ವಕೀಲರಿಂದ

1. ಲಕ್ಷ್ಮೀ ನಾರಾಯಣಾಚಾರಿ ಎಂದರೆ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಆ ವಿಚಾರಗಳನ್ನು ನಾನು ಹೇಳಿ ಬರೆಯಿಸಿರುವುದಿಲ್ಲ. ಪ್ರತಿವಾದಿ ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ವಾದಿ ಪ್ರತಿವಾದಿಯರಿಗೆ ಎಷ್ಟು ಜಮೀನುಗಳಿವೆ ಎಂಬ ವಿಷಯ ನನಗೆ ಗೊತ್ತಿಲ್ಲ. ನಾಲೆ ಉದ್ದೇಶಕ್ಕಾಗಿ ಎಷ್ಟು ಜಮೀನು ಸ್ವಾಧೀನವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಪರಿಹಾರ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಈರೇಗೌಡರವರ ತಂದಗೆ ಸೇರಿದ ಜಮೀನು ನಾಲೆ ಉದ್ದೇಶಕ್ಕಾಗಿ ಸ್ವಾಧೀನವಾಗಿದ್ದು ಅದರಲ್ಲಿ ಬಂದ ಪರಿಹಾರದಲ್ಲಿ ಭಾಗ ಬರಬೇಕೆಂದು ಈ ದಾವೆ ಹೂಡಿರುತ್ತಾರೆ ಎಂದರೆ ಈ ದಾವೆಯ ವಿಚಾರಣೆ ಇದಕ್ಕಿಂತ ಮುಂಚಿನ ಬಾರಿ ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಾಗ ನನಗೆ ಗೊತ್ತಾಗಿರುತ್ತದೆ. ವಾದಿ ಪ್ರತಿವಾದಿಯರು ಒಟ್ಟಾಗಿ ಜಮೀನು ಸಾಗುವಳಿ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ವಾದಿ ಪ್ರತಿವಾದಿಯರು ಬೇರೆ ಬೇರೆಯಾಗಿ ವಾಸವಿರುತಾತರೆ ಎಂದು ನುಡಿಯುತ್ತಾರೆ. ಪಂಚಾಯತಿ ಪಾಲುಪಟ್ಟಿಯನ್ನು ಬರೆಸಿದಾಗ ನಾನು ಹಾಜರು ಇರಲಿಲ್ಲ. ಯಾರ ಯಾರ ನಡುವೆ ಪಂಚಾಯತಿ ಪಾಲುಕಟ್ಟಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಾಲುಪಟ್ಟಿಗೆ ಪ್ರತಿವಾದಿ ಶಿವೇಗೌಡರವರು ಸಹಿ ಮಾಡಿದ್ದರು ಆದರೆ ಅದನ್ನು ಅವರು ಓದಲಿಲ್ಲ. ಈ ಪ್ರಕರಣದ ಯಾವುದೇ ವಿಷಯ ನನಗೆ ಗೊತ್ತಿಲ್ಲದೇ ಇದ್ದರೂ ಶಿವೇಗೌಡರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.